ಕರ್ನಾಟಕ ವಿಧಾನ ಸಭೆ

ಮಂಗಳವಾರ ೬ನೇ ಮಾರ್ಚ್ ೧೯೮೪

ಸದನವು ವಿಧಾನಸೌಧದಲ್ಲಿರುವ ವಿಧಾನಸಭಾಂಗಣದಲ್ಲಿ ಸಭೆಯು ಬೆಳಿಗ್ಗೆ ೯-೦೦ ಘಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ
(ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಡಾ॥ ರಾಜಕುಮಾರ್‌ರವರ ಮೇಲೆ ಉದಕ ಮಂಡಲದಲ್ಲಿ ನಡೆದಿರತಕ್ಕ ಹಲ್ಲೆಯ ಬಗ್ಗೆ

(ಕ್ವಾಂತಿರಂಗದ ಸದಸ್ಯರುಗಳಾದ ಸರ್ವ ಶ್ರೀ ಎಂ. ರಾಮಪ್ಪ, ಬಿ. ಸ್ವಾಮಿರಾವ್, ಕೆ. ಶಿವಮೂರ್ತಿ ಜಿ. ಎಂ. ಕಾನಾಡೆ ಮತ್ತು ಆರ್. ಎನ್. ನಾಯಕ್ ಇವರು ಅಧ್ಯಕ್ಷಪೀಠದ ಮುಂಭಾಗದಲ್ಲಿ ಧರಣಿ ಕುಳಿತ್ತಿದ್ದರು.)

ಶ್ರೀ ಬಿ. ಸ್ವಾಮಿರಾವ್.— ನಮಗೆ ನ್ಯಾಯ ದೊರಕಿಸಿ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ..... ...

ಅಧ್ಯಕ್ಷರು.—ಪ್ರಶ್ನೋತರವೇಳೆ ಮುಂಗಿಯಲಿ. ತಾವು ಹಿರಿಯ ಸದಸ್ಯರಿದ್ದೀರಿ ತಮಗೆ ನಾನು ಏನು ಹೇಳಬೇಕು ?

SRI K. G. MAHESWRAPPA.—Can they hold the House for all time like this? What is this?

ಶ್ರೀ ಎಸ್. ಬಂಗಾರಪ್ಪ.—ಸದನದ ಕಲಾಪಗಳು ವ್ಯವಸ್ಥಿತವಾಗಿ ನಡೆಯಬೇಕೆನ್ನುವ ಆಸೆ ನಮಗೂ ಕೂಡ ಹೆಚ್ಚಾಗಿ ಇದೆ. ನಿನ್ನೆ ನಮ್ಮ ಭಾಗದ ಮತಿಯಿಂದ ಧರಣಿ ಮಾಡತಕ್ಕ ಸಂದರ್ಭದಲ್ಲಿ ತಾವು ಸಭೆಯನ್ನು ಹತ್ತಾತ್ತನೆ ಮುಂದೂಡಿದ್ದೀರಿ. ನಾವು ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೇವೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಎಂ.ಜಿ. ರಾಮಚಂದ್ರನ್‌ರವರು ಉದಕಮಂಡಲದಲ್ಲಿ ಡಾ॥ ರಾಜ್‌ಕುಮಾರ್‌ರವರ ಮೇಲೆ ನಡೆದಂಥ ಹಲ್ಲೆಯ ಬಗ್ಗೆ ನ್ಯಾಯಾಂಗ ತನಿಖೆ ಮಾಡಲು ಒಪ್ಪಿಕೊಂಡಿದ್ದಾರೆನ್ನುವ ಭರವಸೆಯನ್ನು ಕೊಟ್ಟರು. ನಾವು ನಮ್ಮ ಪಾದಪದ್ಮವನ್ನು ಮಂಡನೆ ಮಾಡಿ ಅಲ್ಲಿ ಸಂಚು ನಡೆದಿದೆ ಎನ್ನುವ ಮಾತನ್ನು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಮಾಡಲು ತಮಿಳು ನಾಡಿನ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ ಎಂದು ಹೇಳಿದ್ದಾರೆ ಅದು ತಮ್ಮ ಗಮನಕ್ಕೂ ಬಂದಿದೆ. ಆದರೆ ಈ ದಿನ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ, ತಮಿಳುನಾಡಿನ ಶಾಸನ ಸಭೆಯಲ್ಲಿ ವಾರ್ತಾಮಂತ್ರಿಗಳಾದ ವೀರಪ್ಪನ್ ಅವರು ಡಾ॥ ರಾಜಕುಮಾರ್ ಮೇಲೆ ನಡೆದಿರತಕ್ಕ ಹಲ್ಲೆಯ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆಯೆ ವಿನಹ. ನಮ್ಮ ಮುಖ್ಯಮಂತ್ರಿಗಳು ಹೇಳಿದಹಾಗೆ ನ್ಯಾಯಾಂಗ ತನಿಖೆಮಾಡಲು ನಾವು ಒಪ್ಪಿದ್ದೇವೆ ಎನ್ನುವ ಹೇಳಿಕೆಯನ್ನು ಅವರು